ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 123-129
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಹಲಿಂಗರಂಗ ಮತ್ತು ಅದ್ವೈತ ಸಿದ್ಧಾಂತ : ಒಂದು ಅವಲೋಕನ

**ಜಗದೀಶ ಕೆ[1] ಮತ್ತು ಪ್ರೊ. ಡಿ. ವಿಜಯಲಕ್ಷ್ಮಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು,
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Abstract:**
*ನಡುಗನ್ನಡ ಕನ್ನಡ ಸಾಹಿತ್ಯದ ಅವಧಿಯು ಸುದೀರ್ಘವಾಗಿದ್ದು, ಅನೇಕ ಬದಲಾವಣೆಗಳನ್ನು ಕಂಡಂತಹ ಕಾಲಘಟ್ಟವಾಗಿದೆ. ಈ ಅವಧಿಯಲ್ಲಿ ರಾಜಕೀಯ ಹಾಗೂ ಧಾರ್ಮಿಕ ವಿಷಯಗಳಲ್ಲಿ ಅನೇಕ ವಿಪ್ಲವಗಳು ಕಾಣಿಸಿಕೊಂಡವು. ಕನ್ನಡ ಸಾಹಿತ್ಯವೂ ಸಹ ವಸ್ತುವಿಷಯಗಳಲ್ಲಿ, ಪ್ರಕಾರಗಳಲ್ಲಿ ಬದಲಾವಣೆಗಳಿಗೊಳಪಟ್ಟಿತು. ಕಾವ್ಯದಿಂದ ಧರ್ಮ, ಮಾರ್ಗದಿಂದ-ದೇಸಿ, ವೀರದಿಂದ-ಭಕ್ತಿ, ರಾಜಾಶ್ರಯಗಳಿಂದ ಮುಕ್ತವಾದ ಕವಿಪರಂಪರೆ, ವಚನಗಳಿಂದ ಪುನಃ ಕಾವ್ಯಪ್ರಬೇಧಕ್ಕೆ, ಕಾವ್ಯ ಪ್ರಭೇದದಿಂದ ಕೀರ್ತನೆ, ತತ್ವಪದಗಳ ಹಾದಿಗೆ, ವಸ್ತುನಿಷ್ಠತೆಯಿಂದ ಭಾವನಿಷ್ಠತೆಗೆ, ಜೈನ ಧರ್ಮದಿಂದ ವೀರಶೈವ ಧರ್ಮಕ್ಕೆ, ವೀರಶೈವ ಧರ್ಮದಿಂದ ವೈಷ್ಣವ ಮತಕ್ಕೆ, ಪಂಡಿತರಿಂದ ಜನಸಾಮಾನ್ಯರೆಡೆಗೆ, ಪುರಾಣ-ಪುಣ್ಯಕಥೆಗಳಿಂದ ಧಾರ್ಮಿಕ ವಸ್ತುವಿಷಯಗಳಿಗೆ, ಸಮಕಾಲೀನ ಸ್ಥಿತ್ಯಂತರಗಳಿಗೆ ಕನ್ನಡ ಸಾಹಿತ್ಯ ಹೊರಳಿ ನಿಂತ ಬದಲಾವಣೆಗಳ ಹಾದಿಯಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯ ನಿಂತಿತು. ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವುದು ಶಿವಶರಣರ ವಚನ ಸಾಹಿತ್ಯ, ದಾಸಪಂಥದ ಕೀರ್ತನಾ ಸಾಹಿತ್ಯ, ಭಾಗವತ ಪಂಥದ ವೈಷ್ಣವ ಸಾಹಿತ್ಯ, ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಮಾರ್ಗಗಳ ಅನುಭಾವ ಸಾಹಿತ್ಯ. ಪ್ರಸ್ತುತ ಲೇಖನದಲ್ಲಿ ಮಹಲಿಂಗರಂಗ ಮತ್ತು ಅದ್ವೈತ ಸಿದ್ಧಾಂತ ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ನಡುಗನ್ನಡ, ಮಹಲಿಂಗರಂಗ, ಅದ್ವೈತ ಸಿದ್ಧಾಂತ.*

## ಪೀಠಿಕೆ

ಮಧ್ಯಕಾಲೀನ ಕನ್ನಡ ಸಾಹಿತ್ಯದ ಕಾಲಘಟ್ಟ ರಾಜಕೀಯವಾಗಿಯೂ ಅನೇಕ ಸಂಘರ್ಷಗಳಿಗೆ, ಸಾಮರಸ್ಯಗಳಿಗೆ ಒಳಗಾದದಂತಹ ಕಾಲಘಟ್ಟ ಇದಾಗಿತ್ತು. ಈ ಅವಧಿಯಲ್ಲಿ ಚಾಲುಕ್ಯರು, ಹೊಯ್ಸಳರು, ಸೇವುಣರು, ಕಾಕತೀಯರು ಪರಸ್ಪರವಾಗಿ ಹೋರಾಟಕ್ಕಿಳಿದಿದ್ದರು. ಉತ್ತರದಿಂದ ಅದಾಗಲೇ ಮುಸ್ಲಿಂ ದಕ್ಷಿಣದಲ್ಲಿ ತಮ್ಮ ಅಧಿಪತ್ಯವನ್ನು ಸಾಧಿಸಿದ್ದರು. ಈ ಅವಧಿಯಲ್ಲಿ ಜನಸಾಮಾನ್ಯರು ಸಾಕಷ್ಟು ಯುದ್ಧಗಳನ್ನು, ಹೋರಾಟಗಳನ್ನು, ಸಂಘರ್ಷಗಳನ್ನು ಎದುರಿಸಿದ್ದರು. ಸಾವು, ಲೂಟಿ, ಅವಮಾನಗಳಿಗೆ ಬಲಿಯಾಗಿದ್ದರು. ಬರಗಾಲ, ರಾಜರುಗಳು ಅಸಮರ್ಥತೆ, ಹೊರಗಿನಿಂದ ಬಂದವರ ದರ್ಪ, ಅಧಿಕಾರಗಳಡಿಯಲ್ಲಿ ಜನರು ನುಲುಗಿ ಹೋಗಿದ್ದರು. ತೆರಿಗೆ, ಮತಾಂತರಗಳಂತಹ ಅನೇಕ ವಿಷಯಗಳಿಂದ ಜರ್ಝರಿತಗೊಂಡಿದ್ದರು. ಎಂಟನೆ ಶತಮಾನದಿಂದ ಹನ್ನೆರಡನೆಯ

***Please cite this article as:*** ಜಗದೀಶ ಕೆ ಮತ್ತು ಡಿ. ವಿಜಯಲಕ್ಷ್ಮಿ (2025). ಮಹಲಿಂಗರಂಗ ಮತ್ತು ಅದ್ವೈತ ಸಿದ್ಧಾಂತ : ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 123–129

ಶತಮಾನದವರೆಗಿದ್ದ ವೀರಯುಗ ಹನ್ನೆರಡನೆಯ ಶತಮಾನದೊತ್ತಿಗೆ ಭಕ್ತಿಯುಗವಾಗಿ ಬದಲಾವಣೆಗೊಳ್ಳಲು ಆರಂಭಿಸಿತ್ತು. ಆದರೆ ನಂತರದಲ್ಲಿ ರಾಜಕೀಯ, ಧಾರ್ಮಿಕ ಸಂಘರ್ಷಗಳಿಂದ ಜನಸಾಮಾನ್ಯರು ಭಕ್ತಿಪಂಥದತ್ತ ಹೊರಳಿ ನಿಂತರು. ಒಟ್ಟಾರೆ ಈ ಅವಧಿಯು ಸತತವಾಗಿ ಜನಸಾಮಾನ್ಯರ ಶಾಂತಿಯನ್ನು ಕದಡಿದ ಕಾಲಘಟ್ಟವಾಗಿತ್ತು. ಹಾಗಾಗಿ ಈ ಯುಗದಲ್ಲಿ ಸಹಜವಾಗಿಯೇ ಜನಸಾಮಾನ್ಯರು ರಾಜಪ್ರಭುತ್ವದ ಮೇಲೆ ಹಾಗೂ ಧಾರ್ಮಿಕ ವಿಷಯಗಳ ಮೇಲೆ ಆಸಕ್ತಿಯನ್ನು ಕಳೆದುಕೊಳ್ಳಲು ಆರಂಭಿಸಿದ್ದರು. ಹಾಗಾಗಿ ಇಂತಹ ವಿಪ್ಲವ ಕಾಲಘಟ್ಟದಲ್ಲಿ ಜನಸಾಮಾನ್ಯರು ಧಾರ್ಮಿಕ ವಿಷಯಗಳಲ್ಲಿ ಗಮನಹರಿಸುವಂತಹ ಮಾಡಲು ಅನೇಕ ಭಕ್ತಿಪಂಥಗಳು ಹುಟ್ಟಿಕೊಂಡವು. ತಾತ್ವಿಕ ಹಾಗೂ ಆಧ್ಯಾತ್ಮಿಕ ವಿಷಯಗಳ ಕುರಿತ ಅನೇಕ ಸಂಗತಿಗಳನ್ನು ಬರವಣಿಗೆಯ ಮೂಲಕ ಜನಸಾಮಾನ್ಯರಲ್ಲಿ ಅಭಿವ್ಯಕ್ತಗೊಳಿಸಿದವು.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವುದು ಶಿವಶರಣರ ವಚನ ಸಾಹಿತ್ಯ, ದಾಸಪಂಥದ ಕೀರ್ತನಾ ಸಾಹಿತ್ಯ, ಭಾಗವತ ಪಂಥದ ವೈಷ್ಣವ ಸಾಹಿತ್ಯ, ದ್ವೈತ–ಅದ್ವೈತ–ವಿಶಿಷ್ಟಾದ್ವೈತ ಮಾರ್ಗಗಳ ಅನುಭಾವ ಸಾಹಿತ್ಯ. ಹನ್ನೆರಡನೆಯ ಶತಮಾನದ ವಚನಗಳು ಅನುಭಾವ ಗದ್ಯಗೀತಗಳಾಗಿ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಶೋಭಿಸಿದವು. ವಚನಕಾರರು ಕನ್ನಡ ಭಾಷೆಯನ್ನು ಲೌಕಿಕ ಆಗೂ ಅಲೌಕಿಕ ಸೂಕ್ಷ್ಮಾನುಭವಗಳ ಅಭಿವ್ಯಕ್ತಿಗೆ ಹದಗೊಳಿಸಿದ್ದರು. ವಚನಕಾರರು, ಅನಂತರ ಬಂದ ಹರಿಹರ, ರಾಘವಾಂಕ, ಚಾಮರಸ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದವರು ತಮ್ಮ ಕಾವ್ಯದೊಳಗೆ ತತ್ವನಿರೂಪಣೆಯನ್ನು ಸಹ ಮಾಡಿದ್ದರು. ಇವರುಗಳ ಹಾದಿಯಲ್ಲಿ ಹದಿನೈದನೆಯ ಶತಮಾನದ ನಂತರದಲ್ಲಿ ಅನೇಕ ಅನುಭಾವಿ ಕವಿಗಳು ಜನ್ಮತಳೆದರು. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಬಾಲೀಲಾ ಮಹಾಂತ ಶಿವಯೋಗಿ ಮೊದಲಾದವರು ತಮ್ಮ ತತ್ವಪದಗಳ ಮೂಲಕ ಧರ್ಮ, ತತ್ವ, ಭಕ್ತಿ, ನೀತಿ ನಿರೂಪಣೆಗಳನ್ನು ಮಾಡುವ ಮೂಲಕ ಜನಮನಗಳನ್ನು ಸೆಳೆದರು. ಹದಿನೈದನೆಯ ಶತಮಾನದಲ್ಲಿ ಕಂಡುಬಂದ ವೈಷ್ಣವಭಕ್ತಿ ಪುನಃ ಅರಳುಗೊಳಿಸಿದ ಮೈಸೂರು ಒಡೆಯರ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ಒದಗಿಸಿತು. ಈ ಅವಧಿಯಲ್ಲಿ ಚಿಕ್ಕದೇವರಾಜ ಒಡೆಯರೇ ಮೊದಲುಗೊಂಡಂತೆ ಚಿಕ್ಕುಪಾಧ್ಯಾಯ, ತಿರುಮಲಾರ್ಯ, ಸಂಚಿಯ ಹೊನ್ನಮ್ಮ ಮೊದಲಾದವರು ವೈಷ್ಣವ ಸಾಹಿತ್ಯ ನಿರೂಪಣೆಗೆ ತಮ್ಮ ಕೃತಿಗಳನ್ನು ಸಾಕ್ಷಿಯನ್ನಾಗಿಸಿದರು. ಇವರುಗಳಿಗಿಂತ ಮೊದಲೇ ಅಂದರೆ ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿದ್ದ ರತ್ನಾಕರವರ್ಣಿಯು ಜೈನಮತ ತತ್ವನಿರೂಪಣೆಯನ್ನು 'ಭರತೇಶ ವೈಭವ' ಮತ್ತು 'ಅಣ್ಣನ ಪದಗಳ' ಮೂಲಕ ಮಾಡಿದ್ದನು. ನಂತರದಲ್ಲಿ ವೈಷ್ಣವ ಮತ ನಿರೂಪಣೆಗೆ ಹರಿದಾಸ ಪಂಥ ಹಾಗೂ ಒಡೆಯರ ಕಾಲದ ಸಾಹಿತ್ಯ ಇಂಬು ಕೊಟ್ಟಿತು.

ಹದಿನೈದನೆಯ ಶತಮಾನದಿಂದ ಮೈಸೂರು ಸಂಸ್ಥಾನದ ಸಾಹಿತ್ಯದವರೆಗಿನ ಕನ್ನಡ ಸಾಹಿತ್ಯವನ್ನು ಗಮನಿಸಿದರೆ ಅಲ್ಲಿ ಕಾವ್ಯಕ್ಕಿಂತಲೂ ಹೆಚ್ಚಾಗಿ ತತ್ವನಿರೂಪಣೆಯ ಸಾಹಿತ್ಯಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ಪುರಾಣಗಳ ನಿರೂಪಣೆಗಳಿಗಿಂತಲೂ ತಾತ್ವಿಕತೆಗೆ, ಅನುಭಾವ ಸಿದ್ಧಾಂತಗಳಿಗೆ ಪ್ರಾಶಸ್ತ್ಯವನ್ನು ನೀಡುವುದು ಕಂಡುಬರುತ್ತದೆ. ಇದಕ್ಕೆ ಅಂದಿನ ರಾಜಕೀಯ ವಿಪ್ಲವಗಳೇ ಕಾರಣ ಎಂದರೆ ತಪ್ಪಾಗಲಾರದು. ವಿಜಯನಗರದ ಕಾಲಾನಂತರ ಕರ್ನಾಟಕ ರಾಜ್ಯವು ಛಿದ್ರಗೊಂಡಿತ್ತು. ಹೊಸದಾಗಿ ಪಾಳೇಯಪಟ್ಟುಗಳು ಜನ್ಮ ತಳೆದವು. ಏಕಮೇವಾದ್ವಿತೀಯ ರಾಜಪ್ರಭುತ್ವಗಳು ಮಾಯವಾಗಿ ಸಣ್ಣ ಸಂಸ್ಥಾನಗಳಲ್ಲಿನ ರಾಜರುಗಳು ಪ್ರವರ್ಧಮಾನಕ್ಕೆ

ಬಂದಿದ್ದರು. ಕವಿಗಳಿಗೆ ದೊರೆಯುತ್ತಿದ್ದ ರಾಜಾಶ್ರಯಗಳು ದೂರವಾಗತೊಡಗಿದವು. ಈ ಅವಧಿಯಲ್ಲಿ ಕರ್ನಾಟಕ ರಾಜ್ಯವು ಅನ್ಯಧರ್ಮಿಯ, ಅನ್ಯಭಾಷಾ, ಅನ್ಯಸಂಸ್ಕೃತಿಗಳ ಅಧೀನಕ್ಕೆ ಗುರಿಯಾಗಬೇಕಾಯಿತು. ಈ ಕಾರಣಗಳಿಂದ ಈ ಅವಧಿಯಲ್ಲಿ ರಾಜಕೀಯ ಹಾಗೂ ಧಾರ್ಮಿಕ ಕ್ಷೋಭೆಗಳು ಎದುರಾದವು. ಇದರೊಂದಿಗೆ ರಾಜಕೀಯ ಅಸ್ಥಿರತೆ, ಕ್ಷಾಮ, ಬರಗಾಲ, ಸಾಂಕ್ರಮಿಕ ರೋಗಗಳು ಸಹ ಜನರಲ್ಲಿ ಅನೇಕ ತಲ್ಲಣಗಳನ್ನು ಸೃಷ್ಟಿಸಿದವು. ಇವೆಲ್ಲವುಗಳಿಂದ ಜನಸಮಾನ್ಯರಲ್ಲಿ ಭಯ, ಆತಂಕ, ನೋವು, ನಿರಾಸೆಗಳು ಸ್ವಾಭಾವಿಕವಾಗಿ ಕಾಣಿಸಿಕೊಂಡವು. ಜನರು ಸಹಜವಾಗಿಯೇ ದೇವರು, ಭಕ್ತಿಭಾವಗಳತ್ತ ತಮ್ಮನ್ನು ಕೇಂದ್ರೀಕರಿಸಿಕೊಳ್ಳಲು ಹವಣಿಸಿದರು. ಈ ಅವಧಿಯಲ್ಲಿ ಯುದ್ಧ–ಹೋರಾಟಗಳಿಗಿಂತಲೂ ಶಾಂತಿ, ನೆಮ್ಮದಿಯ ಬದುಕಿಗಾಗಿ ಜನರು ಹಾತೊರೆಯತೊಡಗಿದರು.

ಈ ಪರಿಸ್ಥಿತಿಯಲ್ಲಿ ಹೊರಬಂದ ಆಧ್ಯಾತ್ಮಿಕ ಚಿಂತಕರು ಲೌಕಿಕತೆಯಿಂದ ಅಲೌಕಿಕ ಬದುಕಿನ ಮರ್ಮವನ್ನು ಹುಡುಕತೊಡಗಿದರು. ಲೌಕಿಕತೆಯನ್ನು ಮೀರುವ ಅನುಭಾವದ ಚಿಂತನೆಗಳತ್ತ ತಮ್ಮ ವಿಚಾರಗಳನ್ನು ಕೇಂದ್ರೀಕರಿಸಿದರು. ನಿಜಗುಣಶಿವಯೋಗಿ, ಮಹಲಿಂಗರಂಗ, ಚಿದಾನಂದವಧೂತ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಶಿಶುನಾಳ ಷರೀಫ, ಸಿದ್ಧಾರೂಢ ಮೊದಲಾದ ಅನುಭಾವಿಗಳು, ಅವಧೂತ ಪರಂಪರೆಯವರು ಜನಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆತು ಬದುಕಿನ ಮರ್ಮವನ್ನು, ಅಲೌಕಿಕತೆಯ ಸಾರವನ್ನು, ಆಧ್ಯಾತ್ಮಿಕತೆಯ ಮಹತ್ವವನ್ನು, ಜೀವನ ಮೌಲ್ಯಗಳನ್ನು ಬೋಧಿಸಿದರು. ಊರೂರುಗಳನ್ನು ಅಲೆಯುತ್ತಾ, ಮಠ, ಮಂದಿರಗಳಲ್ಲಿ, ಶಿವಾನುಭವಗೋಷ್ಠಿಗಳಲ್ಲಿ ಪ್ರವಚನಗಳ ಮೂಲಕ ತಮ್ಮ ತತ್ವಚಿಂತನೆಗಳನ್ನು ಜನಸಾಮಾನ್ಯರ ಮುಂದೆ ಅಭಿವ್ಯಕ್ತಗೊಳಿಸಿದರು. ವೇದೋಪನಿಷತ್ತುಗಳಲ್ಲಿನ ವೇದಾಂತಗಳನ್ನು ಕನ್ನಡದಲ್ಲಿ ನಿರೂಪಿಸಿದರು. ಹೀಗೆ ಸಂಸ್ಕೃತದ ಉಪನಿಷತ್ತುಗಳಲ್ಲಿನ ತತ್ವಚಿಂತನೆಗಳನ್ನು ಕಾವ್ಯಮಯವಾಗಿ, ಸ್ವಾನುಭವದ ನೆಲೆಯಲ್ಲಿ ಕನ್ನಡಿಗರಿಗೆ ತಲುಪಿಸಿದವರಲ್ಲಿ ಮಹಲಿಂಗರಂಗನ ಪಾತ್ರ ಅಗ್ರಗಣ್ಯವಾದುದಾಗಿದೆ.

ಸಂಸ್ಕೃತದ ಅದ್ವೈತದ ಸಾರವನ್ನು ಕನ್ನಡದಲ್ಲಿ ನೀಡಿದ ಮಹಾಲಿಂಗರಂಗನು ತನ್ನ 'ಅನುಭವಾಮೃತ' ಕೃತಿಯ ಮೂಲಕ ಹೆಚ್ಚು ಜನಪ್ರಿಯತೆಯನ್ನು ಪಡೆದವನಾಗಿದ್ದಾನೆ. ಈ ಕೃತಿಯು ಒಂದು ದಾರ್ಶನಿಕ ಕಾವ್ಯವಾಗಿದೆ. ಇದು ಸರಳವಾದ ಭಾಮಿನಿ ಷಟ್ಪದಿಯಲ್ಲಿ ಬರೆಯಲಾಗಿರುವ ಕಾವ್ಯವಾಗಿದುದ, ಒಟ್ಟು ಹನ್ನೊಂದು ಅಧ್ಯಾಯಗಳನ್ನು, 804 ಪದ್ಯಗಳನ್ನು ಹೊಂದಿದೆ. ಕನ್ನಡ ಭಾಷೆಯಲ್ಲಿ ಬರೆದ ವೇದಾಂತ ಗ್ರಂಥವಾದ ಈ ಕಾವ್ಯಕ್ಕೆ ಅನಿವಾರ್ಯವಾಗಿರುವ ಘನತೆ, ಗಂಭೀರತೆ, ಸರಳೀಕೃತವಾಗಿದ್ದರೂ ಜಾಳಾಗದ ತಾತ್ವಿಕ ಬಂಧವನ್ನು ಕವಿ ಒದಗಿಸಿದ್ದಾನೆ.

ಮಹಲಿಂಗರಂಗ ತನ್ನ ಅನುಭವಾಮೃತ ಕಾವ್ಯವನ್ನು ಒಟ್ಟು ಹನ್ನೊಂದು ಅಧ್ಯಾಯಗಳಲ್ಲಿ ವಿಭಾಗಿಸಿದ್ದಾನೆ. ತನ್ನ ಕಾವ್ಯದ ಉದ್ದೇಶಕ್ಕೆ ಅನುಗುಣವಾಗಿ ವಿಭಾಗಿಸಿರುವ ಈ ಅಧ್ಯಾಯಗಳು ಸರಳವಾಗಿಯೂ, ಮನನೀಯವಾಗಿಯೂ ಕಾಣಿಸಿಕೊಳ್ಳುತ್ತದೆ. 'ತನ್ನೊಳು ತನ್ನ' ತಿಳಿವ ಈ ಶೋಧಕ್ಕೆ ಕವಿ ಉಪನಿಷತ್ ಧಾರೆಯ ಜಿಜ್ಞಾಸೆಯನ್ನು ಬಳಸಿಕೊಂಡು ಅದನ್ನು ಬೆಳೆಸುತ್ತಾ ಸಾಗುತ್ತಾನೆ. ಇಲ್ಲಿ ಕವಿಯು ಉಪನಿಷತ್‌ಧಾರೆಯ ಪರಿಪೂರ್ಣತೆಯನ್ನು ಮನಗಂಡು ಆ ನೆಲೆಯ ಪದಾರ್ಥ ಶೋಧವನ್ನೇ ಮುಖ್ಯವಾಗಿರಿಸಿಕೊಂಡು ಸಾಗಿರುವ ಧಾಟಿ ಕಂಡುಬರುತ್ತದೆ.

"ಉಪನಿಷತ್‌ನ ಪ್ರಸಿದ್ಧ 'ತತ್ವಂಅಸಿ' ಎಂಬ ಬೀಜ ರೂಪಿ ಸಿದ್ಧಾಂತದ ಎಲ್ಲಾ ಆವರಣಗಳನ್ನು ಕನ್ನಡದ ಕೆಚ್ಚು ಮತ್ತು ಮೆಚ್ಚುಗೆಯಿಂದ

ಬಿಡಿಬಿಡಿಯಾಗಿ ಬಿಡಿಸಿ ಅದನ್ನು ಕನ್ನಡತನದಲ್ಲಿ ತನ್ನೊಳು ತನ್ನ ತಿಳಿವ ಬಗೆಯಾಗಿ ಮೂಡಿಸಿದ ಪರಿಯನ್ನು ಒಟ್ಟು ಕಾವ್ಯ ಅವಲೋಕದನಲ್ಲಿ ಗಮನಿಸಬಹುದು" ಎನ್ನುತ್ತಾರೆ ಡಾ.ಆನಂದ ಋಗ್ವೇದಿ. ಒಟ್ಟಾರೆ 'ಅನುಭವಾಮೃತ' ಕೃತಿ ಅದ್ವೈತ ವೇದಾಂತ ಪ್ರಕ್ರಿಯೆಯನ್ನು ಸ್ವತಂತ್ರ ರೀತಿಯಲ್ಲಿ ಮಂಡಿಸುವ ಮಹತ್ವವಾದ ಕಾವ್ಯವಾಗಿದೆ. ಶಾಸ್ತ್ರ ವಿಷಯವನ್ನು ವಿವರಿಸುವ ಕೃತಿ ಇದಾಗಿದೆ. ಅದ್ವೈತದ ಸಹಜಾನಂದ ಹಾಗೂ ಸಹಜಕಾವ್ಯ ರಸಾನುಭವಗಳೆರಡನ್ನೂ ಓದುಗರಿಗೆ ಈ ಕೃತಿಯು ಏಕಕಾಲಕ್ಕೆ ಉಣಬಡಿಸಿರುವುದು ರಂಗನಾಥನ ಹೆಗ್ಗಳಿಕೆಯಾಗಿದೆ. "ಅದ್ವೈತ ಸಿದ್ಧಾಂತವನ್ನೂ ಆ ಮಾರ್ಗದಲ್ಲಿ ಅದ್ವೈತ ಸಿದ್ಧಿತೆ – ಎಂದರೆ ಜೀವನ್ಮುಕ್ತಿಗೆ – ಕೈಗೊಳ್ಳಬೇಕಾದ ಸಾಧನಾ ಕ್ರಮವನ್ನೂ ಮೊತ್ತಮೊದಲಿಗೆ ಸುದೀರ್ಘವಾದ ಪದ್ಯ ಕೃತಿಯ ಮೂಲಕ ಶಾಸ್ತ್ರಶುದ್ಧವಾಗಿ, ಹೃದಯಂಗಮವಾಗಿ, ತಿಳಿಗನ್ನಡದಲ್ಲಿ ನಿರೂಪಿಸಿದ ಕೀರ್ತಿ ರಂಗನಾಥನಿಗೆ ಸಲ್ಲುತ್ತದೆ"[1]

ದ್ವೈತ ಎಂದರೆ ಎರಡಾದುದು, ಅದ್ವೈತ ಎಂದರೆ ಎರಡಿಲ್ಲದುದು. ಜೀವ ಮತ್ತು ಬ್ರಹ್ಮ ಎರಡೂ ಒಂದೇ ಎಂದು ಪ್ರತಿಪಾದಿಸುವುದೇ ಅದ್ವೈತ. ಅದೈತ ದರ್ಶನದಲ್ಲಿ ಅದ್ವೈತ ಜ್ಞಾನವೇ ಮುಖ್ಯವಾದುದಾಗಿದೆ. ಅದ್ವೈತ ಜ್ಞಾನವೆಂದರೆ ಜೀವ ಹಾಗೂ ಬ್ರಹ್ಮ ಒಂದೇ ಎಂಬ ಜ್ಞಾನ ಹಾಗೂ ಬ್ರಹ್ಮವನ್ನು ಬಿಟ್ಟು ಬೇರೆ ಏನೂ ಇಲ್ಲ ಎಂಬ ಜ್ಞಾನವಾಗಿದೆ. ಶಂಕರಾಚಾರ್ಯರ ಈ ಅದ್ವೈತ ಸಿದ್ಧಾಂತವನ್ನು 'ಬ್ರಹ್ಮ ಸತ್ಯ, ಜಗನ್ಮಿಥ್ಯಾ, ಜೀವೋ ಬ್ರಹ್ಮೈವನಾಪರಃ' ಎಂಬ ಮಾತುಗಳಲ್ಲಿ ಸೂತ್ರೀಕರಿಸಬಹುದಾಗಿದೆ. ಅಂದರೆ ಬ್ರಹ್ಮವೊಂದೇ ಪರಮ ಸತ್ಯ. ಜಗತ್ತು ಮಿಥ್ಯವಾದುದು. ಜೀವವು ಬ್ರಹ್ಮವೇ ಬೇರೆಯಲ್ಲ, ಇಲ್ಲಿ ಮಿಥ್ಯೆ ಎಂದರೆ ತಾತ್ಕಾಲಿಕವಾದ ವ್ಯಾವಹಾರಿಕ ಸತ್ಯ. ಜಗತ್ತು ಸದಾ ಪರಿವರ್ತನಾಶೀಲವಾಗಿದೆ. ಅದಕ್ಕಾಗಿ ಅದು ಮಿಥ್ಯೆ, ಸತ್ಯವೆನ್ನುವರು ತ್ರಿಕಾಲಾಧಿತವಾದದ್ದು, ಸದಾಕಾಲ ಇರುವಂಥದು. ಅವಸ್ವಾತಂತ್ರ್ಯಗಳಲ್ಲೂ (ಜಾಗ್ರತ್, ಸ್ವಪ್ನ, ಸುಷುಪ್ತಿ) ಏಕಪ್ರಕಾರವಾಗಿ ಇರುವಂತಹದು. ಅದ್ವೈತದ ಲಕ್ಷಣಗಳನ್ನು "ನಿರ್ಗುಣ ಬ್ರಹ್ಮವೇ ಪರತತ್ವ ಎಂಬ ಕಲ್ಪನೆ, ಅದರಲ್ಲೇ ಅಡಗಿರುವ ಮಾಯಾವಾದದ ನಂಬಿಕೆ, ಜೀವ ಬ್ರಹ್ಮರ ಅನನ್ಯತೆ ಮತ್ತು ಜೀವವು ಬ್ರಹ್ಮದಲ್ಲಿ ಐಕ್ಯವಾಗುವುದೇ ಮೋಕ್ಷ ಎಂಬ ಕಲ್ಪನೆ. ಅದರ ಸಾಧನಾ ಮುಖದಲ್ಲಿ ಕರ್ಮ ಸಂನ್ಯಾಸ ಮತ್ತು ಸಂಪೂರ್ಣ ತ್ಯಾಗದ ಪ್ರತಿಘಾದನೆ ಮತ್ತು ಅದರಲ್ಲೇ ಅಡಗಿರುವ ಜ್ಞಾನಮಾತ್ರವೇ ಮೋಕ್ಷ ಸಾಧನ ಎಂಬ ನಂಬಿಕೆ"[2]

ವೇದಾಂತ ಸಂಪ್ರದಾಯ ನಿರೂಪಣೆಯೊಂದೇ ಮಹಲಿಂಗರಂಗನ ಉದ್ದೇಶವಾಗಿಲ್ಲ. ಜೀವನ್ಮುಕ್ತಿ ಸಾಧನೆಯ ವಿವಿಧ ಹಂತಗಳ ನಿರೂಪಣೆ, ಜೊತೆಗೆ ಸಾಧಕನ ಮನಸ್ಸಿಗೆ ಬರಬಹುದಾದ ಸಂಶಯಗಳನ್ನು ನಿವಾರಿಸುವುದು; ಸರಳವಾದ ದೃಷ್ಟಾರಗಳಿಂದ ಗಹನವಾದ ವಿಷಯವನ್ನು ಸರಳಗೊಳಿಸುವುದು; 'ತ್ವಮಸಿ' ಮಹಾವಾಕ್ಯದ ಪದಗಳ ಶೋಧನೆ ಮತ್ತು ನಿಣ್ಯ, ಸಾಧಕನಿಗೆ ಇರಬೇಕಾದ ಅರ್ಹತೆ ಹಾಗೂ ವೈರಾಗ್ಯಗಳ ನೈಜ ನಿರೂಪಣೆ ಇವು ಇಲ್ಲಿಯ ಮುಖ್ಯ ಸಂಗತಿಗಳಾಗಿವೆ. ಬ್ರಹ್ಮಾತ್ಮೈಕ್ಯವನ್ನು ಅಳವಡಿಸಲು ಬರಬಹುದಾದ ಎಲ್ಲಾ ಸಂಶಯಗಳನ್ನು ಕವಿ ಇಲ್ಲಿ ಮೊದಲು ನಿವಾರಿಸಿಕೊಳ್ಳುತ್ತಾನೆ. ಸಾಧನೆಯ ವಿವಿಧ ಹಂತಗಳನ್ನು ಅನುಭವದಿಂದ ವಿವರಿಸುತ್ತಾನೆ. ಬರಿಯ ಯುಕ್ತಿಯಿಂದ ತಾನು ಬ್ರಹ್ಮವೆಂದು ಸಾಧಕನು ನಿಶ್ಚಯಿಸಿಕೊಂಡರೂ ಸಹಜಾನಾನಂದವುಂಟಾಗಲು ಏನು ಮಾಡಬೇಕೆಂದು ದಾರಿ ತೋರಿಸಿದ್ದಾನೆ.

[1] ವೀ.ಸೀತಾರಾಮಯ್ಯ, ಎಂ. *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ–ಸಂ–5.* ಪುಟ. 133

[2] ಹಿರಿಯಣ್ಣ, ಎಂ. *ಭಾರತೀಯ ತತ್ವಶಾಸ್ತ್ರದ ರೂಪುರೇಷೆಗಳು.* ಪುಟ. 352

ಅದ್ವೈತದಲ್ಲಿ ಸ್ವಾನುಭವಕ್ಕೆ ವಿಶೇಷ ಮಹತ್ವವಿರುವುದರಿಂದ ಇದಕ್ಕೆ ಕೃತಿಯಲ್ಲಿ ಹೆಚ್ಚು ಒತ್ತು ದೊರೆತಿದೆ.

ಡಾ.ಕೆ.ಬಿ. ಕೃಷ್ಣರಾವ್ ಅವರು ಗುರುತಿಸುವಂತೆ 'ಅನುಭವಾಮೃತ'ದಲ್ಲಿ ವೇದಾಂತವು ಕೇವಲ ಶಾಸ್ತ್ರವಾಗಿರದೆ ಅನುಭವದ ವಿದ್ಯುಕ್ತ ಅಭಿವ್ಯಕ್ತಿಯಾಗಿ ಚಿತ್ರಿತಗೊಂಡಿದೆ. ಸಾಮಾನ್ಯವಾಗಿ ಕಠಿಣವಾಗಿರುವ ಪರಿಭಾಷೆ ಇಲ್ಲಿ ಎಲ್ಲರೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಮಾರ್ಪಾಟಾಗಿದೆ. ತತ್ವವಿಚಾರದ ವಿವರಣೆಯು ಸಮಸ್ತ ಜೀವನಾವಲೋಕನದ ಹಿನ್ನೆಲೆಯಲ್ಲಿ ನಡೆದು ಸೂಕ್ತವಾದ ಅನೇಕ ಉದಾಹರಣೆಗಳ ಮೂಲಕ ಮನದಟ್ಟು ಆಗುವ ರೀತಿಯಲ್ಲಿರುವುದನ್ನು ಗಮನಿಸಿದರೆ ಕೃತಿಕರ್ತನ ಅಪಾರ ಅನುಭವ ಮತ್ತು ಜ್ಞಾನ ವೈಶಾಲ್ಯಗಳು ವ್ಯಕ್ತಗೊಳ್ಳುತ್ತದೆ.

ಮಹಲಿಂಗರಂಗ ಪ್ರತಿಪಾದಿಸಿದ ಈ ಅನುಭವ ಯಾನವು 'ಅದ್ವೈತ'ವನ್ನು ಪುನಃ ಪುನಃ ಚರ್ಚೆಗೆ ಒಳಗು ಮಾಡುತ್ತದೆ. ಈ ಚರ್ಚೆ ಪುನಃ ವೈದಿಕ ಮತ್ತು ಅವೈದಿಕ ಚಿಂತನಾ ಕ್ರಮಗಳ ಜಾಡಿಗೆ ಓದುಗರನ್ನು ಕರೆದೊಯ್ಯುತ್ತವೆ. ವೈದಿಕ ಚಿಂತನೆಯು ಈ ಪರಮಾನುಭವವನ್ನು, ಅದ್ವೈತದ ಏಕತ್ವವನ್ನು ಪರಿಭಾವಿಸಿದರೂ ಅದು ತುರ್ಯಾತೀತವನ್ನು ಸಾಧಿಸಲು ಜಪ ತಪ ಮತ್ತು ಅನುಷ್ಠಾನ ಮಾರ್ಗವನ್ನು ನಿರ್ಣಯಿಸುತ್ತದೆ. ಆದರೆ ಅಂತಹ ಧ್ಯಾನಸ್ಥ ಮನಸ್ಥಿತಿ ಜಪ ತಪಗಳಂತಹ ನೈಷ್ಠಿಕತೆ ಹಾಗೂ ಅನುಷ್ಠಾನಗೊಳಿಸುವ ಯುಜುರ್ ಮಾರ್ಗ ಜನಸಾಮಾನ್ಯರಿಗೆ, ಬಹುಜನ ಸಮುದಾಯಕ್ಕೆ ಸುಲಭವಾಗಿ ಧಕ್ಕುವಂತಹದ್ದಲ್ಲ. ಬದುಕಿನ ಎಲ್ಲಾ ಭಿನ್ನ ಕ್ರಮಗಳು ಸ್ತರಗಳ ಮತ್ತು ವಿವಿಧ ಶ್ರೇಣಿಗಳಲ್ಲಿ ತೊಡಗಿಸಲ್ಪಟ್ಟ ಬಹುಜನ ಸಮುದಾಯಗಳು ಈ ಅನುಭವದಿಂದ ವಂಚಿತರಲ್ಲವಷ್ಟೇ. ಪ್ರತಿಯೊಬ್ಬ ಆತ್ಮ ಮತ್ತು ಪರಮಾತ್ಮ ಅನುಭವ ವಿಚಾರವು ವ್ಯಕ್ತಿಗತವಾದಂತೆಯೇ ಅದು ಸಾಮುದಾಯಿಕ ಅನುಭವದ ಪರಿಧಿಯನ್ನು ಒಳಗೊಂಡಿದೆ ಎನ್ನುವುದನ್ನು ಪ್ರತಿಪಾದಿಸುವುದನ್ನು ಅವೈದಿಕ ಚಿಂತನಾ ಕ್ರಮ ಎಂದೂ ಕರೆಯಬಹುದಾಗಿದೆ. ಹಾಗೆಂದೇ ಬಹುಜನ ಸಮುದಾಯಗಳ ಆಧ್ಯಾತ್ಮಿಕ ಅಪೇಕ್ಷ ಆತ್ಮೋನ್ನತಿಯ ಮಾರ್ಗಗಳಿಗಾಗಿ ಪರಿಶೋಧಿಸಲ್ಪಟ್ಟ ನಾಥ, ಯೋಗಿ, ಅವಧೂತ, ಆರೂಢ ಮೊದಲಾದ ಪಂಥಗಳೆಲ್ಲಾ ಪ್ರತಿಪಾದಿಸುವ ಈ ಅದ್ವೈತ ಯಾನ ಅನುಭವವು ಬದುಕಿನ ಬಾಹ್ಯ ಮತ್ತು ಆಂತರಿಕ ಭಾಗವಾಗಿಯೇ ಪರಿಗಣಿಸಬಹುದಾಗಿರುವುದಾಗಿದೆ.

"ಈ ಅವಧೂತರ ಅದ್ವೈತ ದರ್ಶನವು ಲೋಕದ ಸಮಸ್ತ ಜೀವಿ ಮತ್ತು ವಸ್ತುಗಳನ್ನು ಅವು ಚೈತನ್ಯವುಳ್ಳವು ಎಂದು ಭಾವಿಸುವುದಂತಹದ್ದಾಗಿತ್ತು. ಈ ಅವಧೂತ ದರ್ಶನವು ದೇಹ ಅಥವಾ ಕಾಯವನ್ನು ನಶ್ವರ ಮತ್ತು ಹೇಯ ಎಂದು ಭಾವಿಸುವುದಿಲ್ಲ. ಕಾಯಕಕ್ಕೆ ಮಹತ್ವ ಕೊಡುವುದು ಎಂದರೆ ಕಾಯದ ಮೂಲಕ ಹುಟ್ಟುವ ಕಾಯಕಕ್ಕೂ ಮಹತ್ವ ಕೊಡುವುದು ಎಂದೇ ಅರ್ಥ. ಬಹುತೇಕ ಅವಧೂತರು ಸ್ವತಃ ದುಡಿವ ವರ್ಗ ಹಾಗೂ ಕೆಳಜಾತಿಯಿಂದ ಬಂದವರು:[3] ಎನ್ನುವ ರಹಮತ್ ತರೀಕರೆಯವರು ಅನುಭವದಿಂದ ಒಡಮೂಡಿಸಿರುವ ಈ ಚಿಂತನೆಯ ಪಾಡು ದಿಗ್ದರ್ಶಿಸುವಂತೆ ಬಹುಜನ ಸಮುದಾಯಗಳ ಅದ್ವೈತ ಅನುಭವ ಎಂಬುದು ಅವರ ದೇಹ ಮೂಲ ಮತ್ತು ಆ ನೆಲೆಯಿಂದಲೇ ಕಟ್ಟಲ್ಪಡುವ ಕಾಯಕ ತತ್ವದ ಅನುಭವವೂ ಆಗಿ ಪರಿಭಾವಿಸಲ್ಪಡುವಂತಹುದು. ಆಧುನಿಕ ಅಧ್ಯಯನಕಾರರು ಅದ್ವೈತವನ್ನು ಬೌದ್ಧಿಕ ಸ್ತರದಲ್ಲಿ, ಆತ್ಮ ಪರಮಾತ್ಮ ಪರಮಾರ್ಥದಲ್ಲಿ

[3] ರಮಹತ್ ತರೀಕರೆ. *ಚಿಂತನೆಯ ಪಾಡು.* ಪುಟ. 13

ಮಾತ್ರ ಗ್ರಹಿಸದೇ ಅದನ್ನು ಬಹುಜನ ಸಮುದಾಯದ ಕಾಯಕದ ನೆಲೆಯಲ್ಲಿ, ವ್ಯಕ್ತಿ ಮತ್ತು ಸಮುದಾಯದ ಪ್ರಜ್ಞೆಯ ಪಾತಳಿಯಲ್ಲಿ ಪರಿಕಲ್ಪಿಸಿ ಸಮದರ್ಶಿತ್ವವನ್ನು ಮನಗಾಣಿಸುತ್ತಾರೆ. ಕವಿ ಮಹಲಿಂಗ ಪ್ರತಿಪಾದಿಸಿರುವ ಅನುಭವ ಎನ್ನುವುದು ಕೇವಲ ವಿರಕ್ತಿಯಿಂದ ಒಡಮೂಡುವ ಭಾವವೇ ಅಥವಾ ಅದು ಭಾವ ಅನುಭಾವಗಳ ಸಮ್ಮಿಲಿತ ಜನಪದ ಬದುಕಿನ ರೂಪವೇ ಪ್ರಶ್ನೆಗೆ ಉತ್ತರ ಅವರ ಜೀವನ್ಮುಕ್ತ ಸ್ಥಿತಿ ನಿರೂಪಣದಲ್ಲಿದೆ.

ತತ್ವಮಸಿ ಎಂದರೆ 'ನೀನು ಅದೇ ಆಗಿದ್ದೀಯ' ಎಂದರ್ಥವೆಂದು ಶಂಕರಾಚಾರ್ಯರು ಸಾರಿದ್ದಾರೆ. ಅಂದರೆ ಅವರು ಹೇಳುವಂತೆ 'ನೀನೇ ಬ್ರಹ್ಮ' ಎನ್ನುವ ಅರ್ಥವು ಇಲ್ಲಿ ದೊರೆಯುತ್ತದೆ. ಇಲ್ಲಿ ನೀನು ಎನ್ನುವ ಅರ್ಥವನ್ನು ಸ್ವಂತ ಅನುಭವ, ಗುರು ಉಪದೇಶ ಮತ್ತು ಶ್ರುತಿಯ ಪ್ರಮಾಣದ ಮೂಲಕ ನಿರ್ಣಯಿಸುವುದು ವೇದಾಂತ. ಈ ನಿಟ್ಟಿನಲ್ಲಿ 'ನೀನು' ಎಂದರೆ 'ಜೀವ' ಎಂದು ಅರ್ಥೈಸಬಹುದಾಗಿದೆ. ತಾತ್ವಿಕತೆಯ ಪ್ರಕಾರ ಜೀವ ಎಂದರೆ ಅಹಂಕಾರ ಸ್ವರೂಪವಾದುದು ಎಂಬ ಅರ್ಥವಿದೆ. ಈ ಅರ್ಥವನ್ನು ವಾಚ್ಯಾರ್ಥವೆಂದು ಕರೆಯುತ್ತಾರೆ. ಹಾಗಾದರೆ ನೀನು ಎಂದರೆ "ಜೀವವೇ ಬ್ರಹ್ಮ"ಎಂದು ಪರಿಭಾವಿಸದಂತಾಗುತ್ತದೆ. ನೀನು ಎನ್ನುವುದನ್ನು ಸೂಚಿತಾರ್ಥದ ನೆಲೆಯಲ್ಲಿ ಪರಿಗಣಿಸಿದರೆ, ಅದರಿಂದ ವಿಸ್ತಾರವಾದ ಅರ್ಥ ಸಾಧ್ಯತೆಗಳು ದೊರೆಯುತ್ತವೆ. ಈ ಸೂಚಿತಾರ್ಥವನ್ನು ಲಕ್ಷ್ಯಾರ್ಥವೆಂದು ಕರೆಯುತ್ತಾರೆ. ಆಗ 'ನೀನು' ಎನ್ನುವುದರ ಲಕ್ಷ್ಯಾರ್ಥವು 'ಜೀವ'ವನ್ನು ಅಹಂಕಾರವಿಲ್ಲದ ಚೈತನ್ಯ ಸ್ವರೂಪಿ ಎಂದು ಅರ್ಥೈಸುತ್ತದೆ. ಈ ಸ್ವರೂಪವು ಬ್ವರಹ್ಮ ಸ್ವರೂಪವು ಒಂದೇ ಎನ್ನುವುದನ್ನೇ 'ತತ್ವಮಸಿ' ಎಂದು ಶ್ರುತಿ ವಾಕ್ಯ ಅರ್ಥೈಸುತ್ತದೆ. ಈ ಅರ್ಥವನ್ನು ಪರಿಗ್ರಹಿಸುವುದಕ್ಕಾಗಿ ಕವಿ ಮಹಲಿಂಗರಂಗ ಕೆಲವೊಂದು ಉಪಾಯ ಮಾರ್ಗಗಳನ್ನು ಶೋಧಿಸುತ್ತಾ 'ನೀನು ಎನ್ನುವುದನ್ನು 'ತ್ವಂ ಪದಾರ್ಥವನ್ನು ಶೋಧಿಸಿದ್ದಾನೆ ಎನ್ನಬಹುದಾಗಿದೆ.

ಅದ್ವೈತ ತತ್ವವು ಮನುಷ್ಯ ದೇವರಿಗಾಗಿ ಹೊರಗೆಲ್ಲೊ ಅಲೆದು ಹುಡುಕಬೇಕಿಲ್ಲ; ತೀರ್ಥಯಾತ್ರೆಗಳನ್ನು ಮಾಡಿ ಬಳಲಬೇಕಿಲ್ಲ. ತನ್ನೊಳಗನ್ನು ಶೋಧಿಸಿ ಶುದ್ಧೀಕರಿಸಿ ನೋಡಿದಾಗ ತಾನೇ ಬ್ರಹ್ಮಸ್ವರೂಪವಾಗಿರುವುದನ್ನು ಅವನು ಅರಿತುಕೊಳ್ಳುತ್ತಾನೆ. ಆತ ಎಲ್ಲಾ ಬಂಧನಗಳಿಂದ ಬಿಡುಗಡೆಗೊಂಡು ಸರ್ವತಂತ್ರ ಸ್ವತಂತ್ರನಾಗಿ ಲೋಕಪೂಜ್ಯನಾಗುತ್ತಾನೆ. "ಲೋಕದ ಪದಾರ್ಥಗಳ ಹುಡುಕಾಟದಲ್ಲಿರುವವರು ಅನುಭಾವಿಗಳ ಅನ್ವೇಷಣೆಯನ್ನು ಅರ್ಥ ಮಾಡಿಕೊಳ್ಳಲಾರರು. ಅನುಭಾವಿಗಳು ಘನವಾದುದ್ದನ್ನು ಹಿಡಿಯಲು ಪ್ರಯತ್ನಿಸುವವರೇ ಹೊರತು, ನೆರಳನ್ನಲ್ಲ. ಪದಾರ್ಥಲೋಕದ ಮರುಳರ ಸಂತೆಯಲ್ಲಿ ಅನುಭಾವಿಗಳೇ ನಿಜವಾಗಿ ಅರಿವುಳ್ಳವರು; ಅವರನ್ನು ಹಿಂಬಾಲಿಸುವ ಚೈತನ್ಯವುಳ್ಳವರಿಗೆ ಮಾತ್ರ ಆ ಮಾರ್ಗ ಅರ್ಥವಾಗಬಲ್ಲದು"[4] ಎನ್ನಬಹುದಾಗಿದೆ. ಅನುಭಾವ ಪರಂಪರೆಯ ಈ ಅದ್ವೈತ ದರ್ಶನವು ಲೋಕದ ಸಮಸ್ತ ಜೀವಿ ಮತ್ತು ವಸ್ತುಗಳನ್ನು ಅವು ಚೈತನ್ಯವುಳ್ಳವು ಎಂದು ಭಾವಿಸುವಂತಹದ್ದಾಗಿತ್ತು. ಈ ಅವಧೂತ ದರ್ಶನವು ದೇಹ ಅಥವಾ ಕಾಯವನ್ನು ನಶ್ವರ ಮತ್ತು ಹೇಯ ಎಂದು ಭಾವಿಸುವುದಿಲ್ಲ. ಕಾಯಕ್ಕೆ ಮಹತ್ವ ಕೊಡುವುದು ಎಂದರೆ ಕಾಯದ ಮೂಲಕ ಹುಟ್ಟುವ ಕಾಯಕಕ್ಕೂ ಮಹತ್ವ ಕೊಡುವುದು ಎಂದೇ ಅರ್ಥವಾಗುತ್ತದೆ. ಹಾಗಾಗಿ ಅದ್ವೈತ ಅನುಭವ ಎನ್ನುವುದು ಅವರ ದೇಹ ಮೂಲಕ ಮತ್ತು ಆ ನೆಲೆಯಿಂದಲೇ ಕಟ್ಟಲ್ಪಡುವ ಕಾಯಕ ತತ್ವದ ಅನುಭವವೂ ಆಗಿ ಪರಿಭಾವಿಸಲ್ಪಡವಂತಹದ್ದಾಗಿದೆ. ಅದ್ವೈತವು

[4] ನಾಗಣ್ಣ, ಸಿ. ಪರ್ಷಿಯಾದ ಅನುಭಾವಿ ಶೇಖ್ ಅಬ್ದುಲ್ಲಾ ಅನ್ಸಾರಿ. *ಪ್ರಸಾದ-ದ್ವೈಮಾಸಿಕ,* 18(5). ಪುಟ. 19

ಜೀವನ್ಮುಕ್ತರನ್ನು, ಸ್ಥಿತಪ್ರಜ್ಞರನ್ನಾಗಿಸುತ್ತದೆ. ತನ್ಮೂಲಕ ಆತ್ಮಕಲ್ಯಾಣ ಹಾಗೂ ಲೋಕಕಲ್ಯಾಣಗಳೆರಡನ್ನೂ ಸಾಧಿಸುತ್ತದೆ. ಇಂಥಹ ವೈರಾಗ್ಯವನ್ನು 'ಅನುಭವಾಮೃತ' ಕೃತಿಯು ಸಾಧಿಸಿದೆ. ಮಹಲಿಂಗರಂಗ ವೇದಾಂತದ ಜ್ಞಾನಕ್ಕೆ ಸಂನ್ಯಾಸ ಜೀವನವು ಅನಿವಾರ್ಯವೆಂದು ಹೇಳಿಲ್ಲ. ಬದಲಿಗೆ ಅವನು ಶುದ್ಧ, ಸಾತ್ವಿಕ ಗೃಹಸ್ಥ ಜೀವನವನ್ನು ಬೆಂಬಲಿಸುತ್ತಾನೆ. ಬೂಟಾಟಿಕೆಯ ಬಾಹ್ಯ ಸನ್ಯಾಸವನ್ನು ಅವನು ಖಂಡಿಸುತ್ತಾನೆ. ಹಾಗಾಗಿ ಅಧ್ಯಾತ್ಮಜೀವನವು ಆಸಕ್ತರಾದ ಕೆಲವರಿಗೆ ಹೊರತು ಎಲ್ಲರಿಗಲ್ಲ. ಏಕೆಂದರೆ ಅದು ಬಯಸುವ ಶಿಸ್ತು, ಸಂಯಮ, ನಿರಾಪೇಕ್ಷೆಯ ಮನೋಭೂಮಿಕೆ ಎಲ್ಲರಿಗೂ ಸಾಧ್ಯವಾಗುವುದಲ್ಲ. ಲೌಕಿಕ ಸುಖಗಳನ್ನು ಅನುಭವಿಸಿ ಅದರ ಕ್ಷಣಿಕತೆ, ಅಸಾರತೆಗಳನ್ನು ಗ್ರಹಿಸಿದ ಮನಸ್ಸು ಆ ಕುರಿತಾಗಿ ಉದಾಸೀನಭಾವ ತಾಳುತ್ತದೆ; ತನ್ಮೂಲಕ ವಿವೇಕ ಜಾಗೃತವಾಗುತ್ತದೆ. ಆಗ ಮಾತ್ರ ಆಧ್ಯಾತ್ಮಿಕ ಜೀವನವು ರುಚಿಸುತ್ತದೆ. ಪರಮಶಾಂತಿಯ ತಹತಹ, ತುಡಿತಗಳು ಹೆಚ್ಚುತ್ತವೆ. ಅನುಭಾವಮೃತದಲ್ಲಿ ಇಂಥಹ ವೈರಾಗ್ಯದ ಪ್ರತಿಪಾದನೆಯು ನಿರೂಪಿತಗೊಂಡಿದೆ. ಜೊತೆಗೆ ಅತಿ ಆಸೆಗೆ ಬಲಿಯಾಗದೆ, ಸಂಸಾರದಲ್ಲಿದ್ದೂ ಪಾರಮಾರ್ಥಿಕ ಜೀವನ ನಡೆಸುವುದನ್ನು ಮಹಲಿಂಗರಂಗನು ಪುರಸ್ಕರಿಸುತ್ತಾನೆ.

**ಪರಾಮರ್ಶನ ಗ್ರಂಥಗಳು**


- ಬಿದರಹಳ್ಳಿ ನರಸಿಂಹಮೂರ್ತಿ. (ಸಂ.) (2004). *ಅನುಭವಾಮೃತ.* ಕನ್ನಡ ಸಾಹಿತ್ಯ ಪರಿಷತ್ತು.
- ಹಿರಿಯಣ್ಣ, ಎಂ. (2004). *ಭಾರತೀಯ ತತ್ವಶಾಸ್ತ್ರದ ರೂಪುರೇಷೆಗಳು.* (ಅನು, ಪ್ರಭುಶಂಕರ) ಅಭಿನವ ಪ್ರಕಾಶನ.
- ಹೊಸಕೆರೆ ಚಿದಂಬರಯ್ಯ. (ಸಂ). (1969). *ಅನುಭವಾಮೃತ.* ಎಸ್‌ಎಲ್‌ಎನ್ ಬುಕ್ ಡಿಪೋ.
- ನಾಗಣ್ಣ, ಸಿ. (2003). ಪರ್ಷಿಯಾದ ಅನುಭಾವಿ ಶೇಖ್ ಅಬ್ದುಲ್ಲಾ ಅನ್ಸಾರಿ. *ಪ್ರಸಾದ ದ್ವೈಮಾಸಿಕ,* 18(5).
- ರಹಮತ್ ತರೀಕೆರೆ. (2015). ಚಿಂತನೆಯ ಪಾಡು. ಅಭಿನವ ಪ್ರಕಾಶನ.
- ಸೀತಾರಾಮಯ್ಯ, ಎಂ.ವೀ. (ಸಂ.). (1990). *ಕನ್ನಡ ಸಾಹಿತ್ಯದಲ್ಲಿ ಅದ್ವೈತ.* ಶ್ರೀ ಸ್ಮಾರಕ ಪ್ರತಿಷ್ಠಾನ.
- ಸೀತಾರಾಮಯ್ಯ, ಎಂ.ವೀ. (1982). *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ–ಸಂಪುಟ. 5.* ಬೆಂಗಳೂರು ವಿಶ್ವವಿದ್ಯಾನಿಲಯ.